ಬಿಡುವುದಿಲ್ಲ. ಕಾಲೇಜು ದಿನಗಳಲ್ಲಿ ಸದಾ ಅಮ್ಮನೊಂದಿಗೆ ಜಗಳವಾಗುತ್ತಿತ್ತು; ಅವಳು ಮಾವು ಎಂದರೆ, ನಾನು ಐಸ್‌ಕ್ರೀಮ್ ಎನ್ನುತ್ತಿದ್ದೆ. ನಾನು ಕಾಲೇಜಿಗೆ ಹೋಗುವುದು, ಕಾಂಪಿಟೇಶನ್‌ಗಳಲ್ಲಿ ಭಾಗವಹಿಸುವುದು ಅವರಿಗೆ ಇಷ್ಟವಿರಲಿಲ್ಲ. ಅವರು ಸದಾ ನನ್ನ ಮದುವೆಯ ಬಗ್ಗೆಯೇ ಹೇಳುತ್ತಿದ್ದರು. ಕಡೆಗೆ ಯಾವ ಹುಡುಗನೂ ಮುಂದೆ ಬರದಿದ್ದಾಗ ಅವರಿಗೆ ಮಾತನಾಡಲು ಅವಕಾಶ ಸಿಕ್ಕಿತು. ಮದುವೆಯಾದ ನಂತರವೂ ಎಲ್ಲವೂ ಸುಲಭವಾಗಿರಲಿಲ್ಲ. ಹಸ್ಬೆಂಡ್ ಸಹ ನಿಂದಿಸುವುದರಲ್ಲಿ ಹಿಂಜರಿಯುತ್ತಿರಲಿಲ್ಲ."

ಸರಿತಾ ಸ್ವಲ್ಪ ತಡೆದು ಮತ್ತೆ ಮುಂದುವರೆಸಿದಳು, "ಉದಯ್, ನಾನಂತೂ ಪ್ರಾರಂಭದಿಂದಲೂ ಬಿಂದಾಸ್ ಆಗಿಯೇ ಬದುಕಲು ಬಯಸುತ್ತಿದ್ದೆ. ನಾನು ಅಸಲು ಇರುವುದು ಹೀಗೆಯೇ. ಉಳಿದಿದ್ದು ಬೇರೆಯವರಿಗಾಗಿ ಮಾಡಿಕೊಳ್ಳುತ್ತೇನೆ. ಆ ಸೋಶಿಯಲ್ ವರ್ಕ್, ಆ ಹರಟೆ, ಆ ಸವಕಲು ಮಾತುಗಳು, ಜ್ಞಾನ... ಈ ವಯಸ್ಸಿನಲ್ಲಿ ಮನೆಯಿಂದ ಹೊರ ಹೋಗುವುದಕ್ಕೆ ಅವಕಾಶಗಳನ್ನು ಒದಗಿಸಿಕೊಡುತ್ತವೆ. ವಟವಟ ಮಾತನಾಡುವುದರೊಂದಿಗೆ ಎಲ್ಲರನ್ನೂ ಝಾಡಿಸಿ ಬಿಡುತ್ತೇನೆ. ಲೌಡ್ ಆಗುವುದರಲ್ಲಿ ಲಾಭವೂ ಇದೆಯಲ್ಲ..."

ನಾನು ಸರಿತಾಳನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅದೆಷ್ಟೋ ವರ್ಷಗಳ ಹಿಂದೆ ನನ್ನ ಹೆಂಡತಿ ವರ್ಷಾ ಸ್ವಿಮಿಂಗ್ ಕಲಿಯಲು ಬಯಸುತ್ತಿದ್ದಳು, ಆಗ ಮೊಟ್ಟ ಮೊದಲು ಅವಳನ್ನು, 'ಈ ವಯಸ್ಸಿನಲ್ಲಿ ಸೂಟು ಧರಿಸಿ ಎಲ್ಲರೆದುರು ಹೋಗ್ತೀಯ?' ಎಂದು ನಾನೇ ತಡೆದಿದ್ದೆ. ಬಹುಶಃ ವರ್ಷಾ ನನ್ನ ಮಾತಿಗೆ ಗಮನ ಕೊಡಲಿಲ್ಲ. ಅವಳು ಅಂಶುಲನೊಂದಿಗೆ ಇಲ್ಲಿಗೆ ಬಂದ ನಂತರ ಇಲ್ಲಿದ್ದು, ಸ್ವಿಮಿಂಗ್ ಕಲಿತಳು, ಕಾರು ಚಾಲನೆ ಮಾಡುವುದನ್ನೂ ಕಲಿತಳು.

ಸರಿತಾಳಿಗೆ ಹೇಳಲೇ? ಬೇಡ. ಬಹುಶಃ ಅವಳಿಗೆ ಇಷ್ಟವಾಗಲಾರದು.

ಸರಿತಾ ಮಾತನಾಡುತ್ತಾ ಮಾತನಾಡುತ್ತಾ ಮೌನವಹಿಸಿದಳು.

"ನನ್ನ ಹತ್ರ ಕೂಲ್ ಬಿಯರ್ ಇದೆ. ಕುಡೀತೀಯ? ನೌಕರ ಹೊರ ಹೋಗಿದ್ದಾನೆ. ಯಾರಿಗೂ ಗೊತ್ತಾಗುವುದಿಲ್ಲ." ಸರಿತಾಳನ್ನು ಕೇಳಿದೆ.

ಅವಳು ಆಗಲಿ ಎಂದು ತಲೆಯಾಡಿಸಿದಳು. ನಾನು ಎರಡು ದೊಡ್ಡ ಗ್ಲಾಸಿನಲ್ಲಿ ನೊರೆನೊರೆಯ ತಣ್ಣನೆ ಬಿಯರ್ ತುಂಬಿ ತಂದೆ. ಸರಿತಾ ನನ್ನಿಂದ ಗ್ಲಾಸ್ ಪಡೆದು ಒಮ್ಮೆಲೆ ಎರಡುಮೂರು ಗುಟುಕು ಕುಡಿದಳು. ನಂತರ ಅವಳಿಗೆ ಕೆಮ್ಮು ಹಿಡಿಯಿತು. ಒಂದು ಕಾಲದಲ್ಲಿ ಅವಳು ಬಿಯರ್ ಕಾಂಪಿಟೇಶನ್‌ನಲ್ಲಿ ಹುಡುಗರನ್ನು ಮೀರಿಸುತ್ತಿದ್ದಳು. ಈ ಬಾಂಬ್, ಬಿರುಗಾಳಿಯಂಥ ಈ ಹೆಣ್ಣು ಯಾರ ಕೈಗೆ ಹೋಗುವಳೋ ಎಂದು ಅನ್ನಿಸುತ್ತಿತ್ತು. ಇವತ್ತು ಅವಳು ನನ್ನೆದುರಿಗೇ ಕೂತಿದ್ದಾಳೆ; ತನ್ನ ಹಳೆಯ ದಿನಗಳಲ್ಲಿ ಮತ್ತೊಮ್ಮೆ ಬದುಕುವ ಪ್ರಯತ್ನದಲ್ಲಿ ಸೋಲುತ್ತಾ, ತನ್ನನ್ನು ತಾನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾಳೆ.

ಅವಳು ಕೆಮ್ಮುತ್ತಲೇ ಬಿಯರ್ ಕುಡಿಯಲು ಬಿಟ್ಟೆ. ಅವಳು ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾ, "ಉದಯ್, ನೀನೂ ಸಹ ಮೋಸಗಾರನಾದೆ, ಇವತ್ತು ನೀನು ಸಹ ಮಾಡರ್ನ್ ಸೊಸೆಯನ್ನು ಹುಡುಕಲು ಹೊರಟಿದ್ದೀಯ, ಈ ಹಿಂದೆ ಮಾಡರ್ನ್ ಹೆಂಡತಿಯೊಂದಿಗೆ ಸಂಯಮವನ್ನು ಯಾಕೆ ಪಾಲಿಸಿದೆ?" ಎಂದು ತುಂಬಾ ಮಾತನಾಡಿದಳು.

ನಾನು ಅವಳಿಗೆ, ನಿನ್ನನ್ನು ಮನೆಗೆ ಬಿಟ್ಟು ಬರುತ್ತೇನೆ ಎಂದೆ. ಆದರೆ ಅವಳು ಒಪ್ಪದೆ ವಿಚಿತ್ರವಾಗಿ ನಕ್ಕಳು, "ನೀನು ಬರ್ತೀಯ? ನನ್ನ ಮನೆಗೆ? ನನ್ನ ಹಸ್ಬೆಂಡಿಗೆ ಏನಂತ ಹೇಳಲಿ? ಕ್ಲಾಸ್ ಮೇಟ್ ಅನ್ನಲೇ? ಬಾಯ್‌ಫ್ರೆಂಡ್ ಅನ್ನಲೇ? ನೀನಂತೂ ಹೊರಟು ಹೋಗುವೆ, ಆಮೇಲೆ ಹಸ್ಬೆಂಡ್,